

ಕನ್ನಡಕ ಚಿನ್ಹೆ ಇಲ್ಲದ ನಾಗರ

# 'ನಾಗರಾಜ'ನ ವರ್ಣಾಲಂಕಾರ!

■ ಚಿತ್ರ– ಬರಹ:
**ಆರ್.ಕೆ. ಮಧು**



ಶ್ವೇತ ನಾಗರ

ನಾಗರ ಹಾವುಗಳಿಗೆ ನಾನಾ ವರ್ಣಗಳಿವೆ ಅನ್ನುವುದು ಗೊತ್ತೆ?

ಸಾಮಾನ್ಯವಾಗಿ ನಾವು ನೋಡುವ ನಾಗರಹಾವಿನಲ್ಲಿ ಮಿಡಿನಾಗರ, ಗೋಧಿನಾಗರಗಳ ಬಗ್ಗೆ ಕೇಳಿದ್ದೇವೆ. ನೋಡಿದ್ದೇವೆ. ಆದರೆ ಕನ್ನಡಕವಿಲ್ಲದ ನಾಗರ, ಒಂದೇ ಕನ್ನಡಕದ ನಾಗರ, ಬಿಳಿನಾಗಗಳ ಬಗ್ಗೆ ಗೊತ್ತೆ? ಅಲ್ಲದೇ ಕಾಳಿಂಗ, ಉಗುಳುವ ನಾಗರ ಮುಂತಾದವೂ ಇವೆ.

ಗೋಧಿ ನಾಗರ ಎಲ್ಲೆಡೆ ಕಾಣಸಿಗುತ್ತವೆ. ಆದರೆ ಶ್ವೇತ ನಾಗರ ಬಲು ಅಪರೂಪ. ವರ್ಣತಂತುವಿನ ದೋಷದಿಂದ ಈ ರೀತಿಯ ಬಿಳಿ ನಾಗರಗಳು ಜನಿಸುತ್ತವೆ. ಇದರ ಬಣ್ಣವೇ ಇದರ ಶತ್ರುವಾಗಿ ಪರಿಸರದ ತನ್ನ ವೈರಿಗಳಿಗೆ ಸುಲಭವಾಗಿ ಸಿಕ್ಕಿಬಿದ್ದು ಇವು ಅಸುನೀಗುತ್ತವೆ. ಆಕರ್ಷಕ ಕೆಂಪು ಕಣ್ಣುಗಳು ಇದರ ವಿಶೇಷ. ಭಾರತವಲ್ಲದೆ ಏಷ್ಯಾದ ಹಲವು ದೇಶಗಳಲ್ಲಿ ಇವು ಕಂಡುಬರುತ್ತವೆ.

ಸಾಮಾನ್ಯವಾಗಿ ನಾಗರಹಾವಿನ ಹೆಡೆಯ ಮೇಲೆ ಮೂಡಿರುವ 'ವಿ' ಆಕಾರವನ್ನು ಹಾವಿನ ಗುರುತಿಸುವಿಕೆಯಲ್ಲಿ 'ಕನ್ನಡಕ' ಎಂದು ಕರೆಯುತ್ತೇವೆ. ಬಹುತೇಕ ನಾಗರಹಾವುಗಳಲ್ಲೂ ಇದು ಕಂಡುಬರುತ್ತದೆ. ಕೆಲವು ಹಾವುಗಳಲ್ಲಿ ಇದು ಸೊನ್ನೆಯಾಕಾರದಲ್ಲಿದ್ದು ಒಂದೇ ಇರುತ್ತದೆ. ಇದನ್ನು 'ಏಕ ಕನ್ನಡಕದ ಹಾವು' ಎಂದೂ ಕರೆಯುತ್ತಾರೆ. ಈ ಹಾವುಗಳನ್ನು ನಾಗರ ಎಂದು ಗುರುತಿಸದೆ ಕೆಲವರು ಅಪಾಯಕ್ಕೆ ಸಿಲುಕುವುದೂ ಇದೆ.

ನಾಗರ ಹಾವಿನ ವಿಷ ತೀಕ್ಷ್ಣವಾಗಿದ್ದು ಮೆದುಳು, ನರಮಂಡಲ ಹಾಗೂ ಜೀವಕೋಶಗಳ ಮೇಲೆ ಹಾನಿ ಮಾಡುವುದರಿಂದ, ಕಚ್ಚಿದ ಒಂದು ಗಂಟೆಯಲ್ಲಿ ಮನುಷ್ಯ ಸಾವಿಗೀಡಾಗುತ್ತಾನೆ.

ನಾಗರಹಾವು ಎಷ್ಟೇ ವಿಷಕಾರಿಯಾದರೂ ಅದನ್ನು ರೈತನ ಮಿತ್ರ ಎಂದೇ ಕರೆಯುತ್ತೇವೆ. ಅವುಗಳ ಮುಖ್ಯ ಆಹಾರ ಇಲಿ. ದಿನಕ್ಕೆ ಕನಿಷ್ಟ ಐದು ಇಲಿಗಳನ್ನು ತಿನ್ನುವ ಹಾವುಗಳಿವೆ. ರೈತರನ್ನು ಇಲಿಯ ಉಪಟಳದಿಂದ ಕಾಯುವ ಕೆಲಸವೂ ಈ ಹಾವುಗಳದ್ದು.

ಹಾವಿನ ಕಡಿತಕ್ಕೆ ಹಾವಿನ ವಿಷವೇ ಮದ್ದು ಎಂಬುದು ಕಟುಸತ್ಯ. ನಾಗರಹಾವನ್ನು ಕಂಡಕೂಡಲೇ ವಿಷಜಂತುವೆಂದು ಹೊಡೆದು ಸಾಯಿಸುವುದು ಥರವಲ್ಲ. ನಾಗರಹಾವುಗಳು ಅಳಿವಿನಂಚಿನಲ್ಲಿರುವ ಪ್ರಾಣಿಯೂ ಹೌದು. ನಿಸರ್ಗದ ಸರಪಳಿಯನ್ನು ಕಾಯ್ದುಕೊಳ್ಳಲು ಅದರ ರಕ್ಷಣೆ ಅತ್ಯಗತ್ಯ.